ಸಹಕಾರ ಸಂಘಗಳ ನಿಬಂಧಕರ ಕಛೇರಿ
ನಂ. 1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52

**ಕರ್ನಾಟಕ ಸರ್ಕಾರ**

**(ಸಹಕಾರ ಇಲಾಖೆ)**

**ಸಹಕಾರ ಸಂಘಗಳ ನಿಬಂಧಕರ ಕಛೇರಿ, ಕರ್ನಾಟಕ ರಾಜ್ಯ, ಬೆಂಗಳೂರು-560052.**

**ಸಂ.ಆರ್‌ಎಸ್‌ಆರ್/ಸೌಹಾರ್ದ/144/2018-19** **ದಿನಾಂಕ: 30-11-2018**

**"ಸುತ್ತೋಲೆ"**

**ವಿಷಯ:** ದಿ ಕರ್ನಾಟಕ ಅಪಾರ್ಟ್‌ಮೆಂಟ್ ಓನರ್‌ಷಿಪ್ ಆಕ್ಟ್ 1972 ಹಾಗೂ ದಿ ಕರ್ನಾಟಕ ಓನರ್‌ಷಿಪ್ ಫ್ಲಾಟ್ಸ್ ಆಕ್ಟ್ 1972 ರಡಿಯಲ್ಲಿ ಅಸೋಷಿಯೇಷನ್‌ಗಳನ್ನು ನೋಂದಣಿ ಮಾಡುವ ಕುರಿತು.

**ಉಲ್ಲೇಖ:** ಸರ್ಕಾರದ ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಆದೇಶ ಸಂ.ಯುಡಿಡಿ/466/ಎಂಎನ್‌ವೈ/2005 ಬೆಂಗಳೂರು ದಿನಾಂಕ:14-03-2012.

*******

ವಿಷಯಕ್ಕೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಇಲಾಖೆಯು ದಿ ಕರ್ನಾಟಕ ಓನರ್‌ಷಿಪ್ ಫ್ಲಾಟ್ಸ್ ಆಕ್ಟ್ 1972ರ ಕಾರ್ಯ ನಿರ್ವಹಣೆಯ ಸಂಬಂಧ ಸಹಕಾರ ಸಂಘಗಳ ಉಪನಿಬಂಧಕರುಗಳಿಗೆ ಉಲ್ಲೇಖಿತ ಆದೇಶದಲ್ಲ ಅಧಿಕಾರ ಪ್ರತ್ಯಾಯೋಜಿಸಿದೆ.

ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರ ಪ್ರಕರಣ 3 ರಂತೆ ಸಾಹಿತ್ಯ, ವಿಜ್ಞಾನ, ಧರ್ಮಾರ್ಥ, ಶಿಕ್ಷಣ, ಕ್ರೀಡೆ, ಲಲಿತ ಕಲೆ, ಚಿತ್ರಕಲೆ, ಪ್ರಾಕೃತಿಕ ಸಂಪತ್ತು, ಅಪರೂಪದ ಮೂಲಭೂತ ಸೌಕರ್ಯಗಳಾದ ಭೂಮಿ ಯಾಂತ್ರಿಕ ಶಕ್ತಿ, ಜಲ, ಅರಣ್ಯ ಮತ್ತು ಸರ್ಕಾರ ಕಾಲಕಾಲಕ್ಕೆ ಮೂಲಭೂತ ಸೌಕರ್ಯವೆಂದು ಅಧಿಸೂಚಿಸಿದಂತಹ ಇತರೆ ಸಂಪತ್ತುಗಳ ಸಂರಕ್ಷಣೆ ಮತ್ತು ಸದುಪಯೋಗ, ಗ್ರಂಥಾಲಯ, ವಸ್ತು ಸಂಗ್ರಹಾಲಯ ಮತ್ತು ಕೈಗಾರಿಕಾ ಮತ್ತು ವಾಣಿಜ್ಯ ಅಥವಾ ಇತರೆ ಯಾವುದೇ ಉಪಯುಕ್ತ ಭೋಧನೆ ಮತ್ತು ಜ್ಞಾನದ ಪ್ರಸಾರ, ರಾಜಕೀಯ ಶಿಕ್ಷಣದ ಪ್ರಸಾರ ಈ ಉದ್ದೇಶಗಳಿಗೆ ಸಂಬಂಧಿಸಿದ ಸಂಘಗಳನ್ನು ಮಾತ್ರ ನೋಂದಣಿ ಮಾಡಬಹುದಾಗಿದೆ.

ಅಂತಾಗಿ ದಿ ಕರ್ನಾಟಕ ಓನರ್‌ಷಿಪ್ ಫ್ಲಾಟ್ಸ್ ಆಕ್ಟ್ 1972ರ ಕಲಂ 10 ರಲ್ಲಿ Promoter to take steps for formation of co-operative society or company ಎಂದು ಇದ್ದು, ಪ್ರವರ್ತಕರು

ಸಹಕಾರ ಸಂಘ ಅಥವಾ ಕಂಪನಿಯಾಗಿ ಸಂಸ್ಥೆಗಳನ್ನು ನೋಂದಣಿ ಮಾಡಬೇಕಾಗಿರುತ್ತದೆ. ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರಡಿ ನೋಂದಣಿ ಮಾಡುವುದು ಸೂಕ್ತವಲ್ಲ.

ಆದರೆ ಅಪಾರ್ಟ್‌ಮೆಂಟ್ ಓನರ್‌ಷಿಪ್ ಸೋಸೈಟಿ/ಅಸೋಸಿಯೇಷನ್‌ಗಳನ್ನು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರಡಿ ನೋಂದಣಿ ಮಾಡುತ್ತಿರುವುದು ಈ ಕಛೇರಿಯ ಗಮನಕ್ಕೆ ಬಂದಿರುತ್ತದೆ. ಈ ಕಾಯ್ದೆಯಡಿ ನೋಂದಣಿ ಮಾಡಿದ ಕಾರಣ ಅಂತಹ ಸಂಘಗಳ ಹತೋಟಿ/ನಿಯಂತ್ರಣ ಮತ್ತು ಹೊಣೆಗಾರಿಕೆ ಹಾಗೂ ಜವಾಬ್ದಾರಿ (Accountability) ಯನ್ನು ನಿಗಧಿ ಪಡಿಸಲು ಕಾಯ್ದೆಯಡಿ ಅವಕಾಶವಿರುವುದಿಲ್ಲ.

ಆದ್ದರಿಂದ ಇನ್ನೂ ಮುಂದೆ ದಿ ಕರ್ನಾಟಕ ಅಪಾರ್ಟ್‌ಮೆಂಟ್ ಓನರ್‌ಷಿಪ್ ಆಕ್ಟ್ 1972ರ ಅವಕಾಶಕ್ಕೆ ಒಳಪಡುವಂತಹ ಯಾವುದೇ ವಿಧದ ಅಸೋಸಿಯೇಷನ್/ಸೊಸೈಟಿಗಳನ್ನು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರಡಿ ನೋಂದಣಿ ಮಾಡತಕ್ಕದ್ದಲ್ಲ.

(ಎಂ.ಕೆ.ಅಯ್ಯಪ್ಪ)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ರವರಿಗೆ,
ರಾಜ್ಯ ಎಲ್ಲಾ ಜಿಲ್ಲೆಗಳ
ಸಹಕಾರ ಸಂಘಗಳ ಉಪನಿಬಂಧಕರು,

<u>ಪ್ರತಿ ಮಾಹಿತಿಗಾಗಿ:-</u>

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಗೌರವ ಪೂರ್ವಕವಾಗಿ ಸಲ್ಲಿಸಲಾಗಿದೆ.
2. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು ರವರಿಗೆ ಗೌರವ ಪೂರ್ವಕವಾಗಿ ಸಲ್ಲಿಸಲಾಗಿದೆ.
3. ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ಮತ್ತು (ಬಳಕೆ ಮತ್ತು ಮಾರಾಟ/ಸಂಘ ಸಂಸ್ಥೆ) ಕೇಂದ್ರ ಕಛೇರಿ,ಬೆಂಗಳೂರು.
4. ಸಹಕಾರ ಸಂಘಗಳ ಜಂಟಿ ನಿಬಂಧಕರು, (ಕಾನೂನು ಕೋಶ) ಕೇಂದ್ರ ಕಛೇರಿ, ಬೆಂಗಳೂರು.
5. ರಾಜ್ಯದ ಎಲ್ಲಾ ಪ್ರಾಂತಗಳ ಸಹಕಾರ ಸಂಘಗಳ ಜಂಟಿ ನಿಬಂಧಕರು,

ಸಹಕಾರ ಸಂಘಗಳ ಸಹಾಯಕ ನಿಬಂಧಕರು,
(ಗೃಹ)
ಸಹಕಾರ ಸಂಘಗಳ ನಿಬಂಧಕರ ಕಛೇರಿ,
ನಂ. 1, ಆಲಿ ಅಸ್ಕರ್ ರಸ್ತೆ, ಬೆಂಗಳೂರು–52